◆ **ನಿಮ್ಮ ಬಾಲ್ಯ ಕಾಲದ ವಾತಾವರಣವೆಲ್ಲ ಸಂಪೂರ್ಣ ಸಾಹಿತ್ಯಕವೇ ಎನಿಸುತ್ತದೆ. ಯಾಕೆಂದರೆ ನಿಮ್ಮ ಕನ್ನಡದ ಓದು ಹಾಗಿದೆಯಲ್ಲ...!**

ಹೌದು, ನಾನು ಓದಿದ್ದು ಕನ್ನಡ ಮಾಧ್ಯಮದಲ್ಲಿ. ಶಾಲಾ ಪ್ರವೇಶ ಬೆಂಗಳೂರಿನಲ್ಲಿ. ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆ ಕೋಲಾರದಲ್ಲಿ. ಶಿವಮೊಗ್ಗದಲ್ಲಿ ಪಿ.ಯು.ಸಿ. ಆಯಿತು. ಅಲ್ಲಿಂದ 1966ರಲ್ಲಿ ಮತ್ತೆ ಬೆಂಗಳೂರಿನಲ್ಲಿ ಬಿ.ಎ.ಆನರ್ಸ್ ಮತ್ತು ಸ್ನಾತಕೋತ್ತರ ಪದವಿ ಅಭ್ಯಾಸ. ಎರಡು ವರ್ಷ ಹೈದರಾಬಾದಿನ ಇಂಗ್ಲಿಷ್ ಹಾಗೂ ವಿದೇಶಿ ಭಾಷಾ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಸಹಾಯಕ. ಇನ್ನು ನನ್ನ ಬಾಲ್ಯದ ಕೌಟುಂಬಿಕ ವಾತಾವರಣ ಬಹುಭಾಷಿಕ. ತಂದೆಯವರು ಆ ಕಾಲಕ್ಕೆ ಮೈಸೂರಿನಲ್ಲಿ ಇಂಗ್ಲಿಷ್ ಬಿ.ಎ. ಮಾಡಿದ್ದವರು. ಜೆ.ಸಿ. ರಾಲೊ ಅವರ ವಿದ್ಯಾರ್ಥಿಯಾಗಿದ್ದವರು. ಸಂಸ್ಕೃತ, ಇಂಗ್ಲಿಷ್ ಎರಡನ್ನೂ ಓದಿ ಬಲ್ಲವರಾಗಿ, ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಇವರು ರಾತ್ರಿಯ ಹೊತ್ತು ಇಂಗ್ಲಿಷ್, ಗ್ರೀಕ್ ಮೂಲದ ಮತ್ತು ಅರೇಬಿಯನ್ ನೈಟ್ಸ್ ಕಥೆ ಹೇಳಿದರೆ, ಯಾವಾಗಲೂ ತಾಯಿಯ ಸೆರಗನ್ನೇ ಹಿಡಿದು ಓಡಾಡುತ್ತಿದ್ದ ನನಗೆ ಆಕೆ ಪುರಾಣ ಕಥೆಗಳನ್ನು ಹೇಳುತ್ತಿದ್ದರು. ಅವರು ತಂಜಾವೂರು ಮೂಲದವರು. ಹೀಗಾಗಿ ತಂದೆತಾಯಿಗಳಿಂದ ಸ್ಥಳೀಯ ಮತ್ತು ಹೊರಜಗತ್ತಿನ ಕಥೆಗಳು ಏಕಕಾಲಕ್ಕೆ ಅಂತರಂಗವನ್ನು ಪ್ರವೇಶಿಸಿದವು. ಇದರೊಂದಿಗೆ ಸಂಜೆಯ ಹೊತ್ತು ತಂದೆತಾಯಿ ಪುರಾಣ ಪ್ರವಚನ, ಹರಿಕಥೆಗೆ ಹೋದರೆ ನಾನೂ ಹೋಗುತ್ತಿದ್ದೆ. ಆ ಹರಿಕಥೆಯದೇ ಒಂದು ವಿಚಿತ್ರ ಪ್ರಪಂಚ. ಅವರೆಲ್ಲ ನಮ್ಮ ಹಳೆಯ ಕಾವ್ಯ ಕಥನಗಳ ಪ್ರಚಾರಕರು. ಅದೊಂದು ಸಂಗೀತ, ನಾಟಕ, ಹಾಸ್ಯ, ಕಥನಮಯ ಶೈಲಿಯ ಪ್ರಸಂಗ. ಅದೆಂಥ flexible ಪ್ರಕಾರ ನೋಡಿ! ಯಾವುದರ ನಡುವೆಯೂ ಗೋಡೆ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಬಹುಭಾಷಿಕತೆಯ ಬಗ್ಗೆ ಕೆಲಸ ಮಾಡುತ್ತಿರುವ ನನಗೆ ಇದೆಲ್ಲ ಪ್ರಭಾವ ಬೀರಿದೆ. ನಿಜವಾದ ಬಹುಭಾಷಿಕತೆಗೆ ಗೋಡೆ ಇರುವುದಿಲ್ಲ. ಒಂದು ಇನ್ನೊಂದನ್ನು ಬಳಸಿಕೊಂಡು ಶ್ರೀಮಂತವಾಗುವ ಕ್ರಮ. ಇನ್ನೊಂದು ವಿಷಯ, ಇಂಗ್ಲಿಷ್ ಓದಿದ ನನ್ನ ತಂದೆಯವರು ಗಾಂಧೀ ಭಕ್ತರು. ಖಾದಿ ಬಟ್ಟೆ, ಟೋಪಿ ಹಾಕುತ್ತಿದ್ದರು. ಕೋಲಾರದಲ್ಲಿರುವಾಗ ಚೀನಾ ಎದುರು ಭಾರತ ಯುದ್ಧವಾಗಿ, ಅಲ್ಲೊಂದು ಸಭೆಯಲ್ಲಿ ತಂದೆ ಬೆರಳಲ್ಲಿದ್ದ ಪವಿತ್ರದುಂಗುರವನ್ನು ದಾನ ಮಾಡಿದ್ದರು.

◆ **ಪದವಿ, ಸ್ನಾತಕೋತ್ತರ ತರಗತಿಗಳಲ್ಲಿ ನೀವು ಓದಿದ ವಿಷಯ ಮತ್ತು ಪ್ರಾಧ್ಯಾಪಕರು, ಗೆಳೆಯರಿಂದ ಪಡೆದುಕೊಂಡ ಅನುಭವ ವಿಶೇಷ ಎಂಥದು?**

ನನಗೆ ಮೊದಲಿನಿಂದಲೂ ಇಂಗ್ಲಿಷ್ ಸಾಹಿತ್ಯ ಪ್ರಪಂಚ ಇಷ್ಟವಿತ್ತು. ಇಂಗ್ಲಿಷ್ ಓದಲು ಶಿವಮೊಗ್ಗದಿಂದ ಬಂದೆ. ನನಗೆ ಆ ಭಾಷೆ ಬರುತ್ತದೆಂದುಕೊಂಡಿದ್ದೆ. ಆದರೆ ಬೆಂಗಳೂರಿನಲ್ಲಿ ಇಂಗ್ಲಿಷ್ ಮಾಧ್ಯಮದಿಂದ ಬಂದ ವಿದ್ಯಾರ್ಥಿಗಳ ಇಂಗ್ಲಿಷ್ ವೈಖರಿ ಕೇಳಿ ಬೆಚ್ಚಿದೆ. ಈ ಥರದ ಇಂಗ್ಲಿಷ್ ಓದಬೇಕಾ, ಬೇಡವಾ ಎನಿಸಿಬಿಟ್ಟಿತು. ಆದರೆ ನಾನು ಇಂಗ್ಲಿಷ್ ಚೆನ್ನಾಗಿಯೇ ಕಲಿತವನಾಗಿದ್ದೆ. ಬೇರೆಡೆಯಿಂದ ಬಂದವರಿಗೆಲ್ಲ ಇಲ್ಲಿಯ ವಾತಾವರಣ ಹುಟ್ಟಿಸುವ ಕೀಳರಿಮೆ ನನ್ನಲ್ಲೂ ತಲೆಯೂರಿತ್ತು. ಒಮ್ಮೆ ಪ್ರಾಧ್ಯಾಪಕರಾಗಿದ್ದ ಭರತ್‌ರಾಜ್ ಸಿಂಗ್ ಒಂದು ವಿಚಾರಸಂಕಿರಣ ಏರ್ಪಡಿಸಿ ನಮಗೆಲ್ಲ ಒಂದೊಂದು ಪ್ರಬಂಧ ಬರೆಯಲು ಹೇಳಿದರು. ನಾನು ವಾಲ್ಟರ್ ಸ್ಕಾಟ್ ಕುರಿತು ಬರೆದಿದ್ದೆ. ಅದನ್ನು ತರಗತಿಯಲ್ಲಿ ಎತ್ತಿ ಹಿಡಿದ ಪ್ರಾಧ್ಯಾಪಕರು ಇದು ಎಲ್ಲದರ ನಡುವೆ ಉತ್ತಮ ಪ್ರಬಂಧ ಎಂದರು. ಆಮೇಲೆ ಬಿ.ಎ. ಆನರ್ಸ್‌ನಲ್ಲಿ ಮೂರನೇ ಸ್ಥಾನ, ಎಂ.ಎ.ದಲ್ಲಿ ಪ್ರಥಮ ರ್‍ಯಾಂಕ್. ಈ ಮಧ್ಯೆ ಭಾಷಾಶಾಸ್ತ್ರದಲ್ಲಿ ಆಸಕ್ತಿ ಹುಟ್ಟಿತು. ಆಗ ಆನರ್ಸ್ ತರಗತಿಗಳಿಗೆ History of the English Language ವಿಷಯ ಸಂಬಂಧಿ ಪತ್ರಿಕೆ ಇರುತ್ತಿತ್ತು.